"ಮಧುರ ಮಕ್ಕಳೇ- ಯೋಗಬಲದಿಂದ ಕೆಟ್ಟಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಂಡು ಸ್ವಯಂನಲ್ಲಿ ಶ್ರೇಷ್ಠ ಸಂಸ್ಕಾರಗಳನ್ನು ಧಾರಣೆ ಮಾಡಿಕೊಳ್ಳಿರಿ, ಜ್ಞಾನ ಮತ್ತು ಪವಿತ್ರತೆಯ ಸಂಸ್ಕಾರವು ಶ್ರೇಷ್ಠ ಸಂಸ್ಕಾರವಾಗಿದೆ"

ಪ್ರಶ್ನೆ: ನೀವು ಮಕ್ಕಳ ಜನ್ಮಸಿದ್ದ ಅಧಿಕಾರವು ಯಾವುದಾಗಿದೆ? ತಮಗೆ ಯಾವ ಅನುಭವವಾಗುತ್ತದೆ?

ಉತ್ತರ: ತಮ್ಮ ಜನ್ಮಸಿದ್ಧ ಅಧಿಕಾರವು ಮುಕ್ತಿ-ಜೀವನ್ಮುಕ್ತಿಯಾಗಿದೆ, ನಾವು ತಂದೆಯ ಜೊತೆ ಹಿಂತಿರುಗಿ ಮನೆಗೆ ಹೋಗಬೇಕಾಗಿದೆ ಎಂಬುದೂ ಸಹ ಈಗ ಅನುಭವವಾಗುತ್ತದೆ. ತಾವು ತಿಳಿದುಕೊಂಡಿದ್ದೀರಿ- ತಂದೆಯ ಭಕ್ತಿಯ ಫಲ ಮತ್ತು ಜೀವನ್ಮುಕ್ತಿಯನ್ನು ಕೊಡಲು ಬಂದಿದ್ದಾರೆ, ಈಗ ಎಲ್ಲರೂ ಶಾಂತಿಧಾಮಕ್ಕೆ ಹೋಗಬೇಕಾಗಿದೆ, ಎಲ್ಲರೂ ತಮ್ಮ ಮನೆಯ ಸಾಕ್ಷಾತ್ಕಾರ ಮಾಡಬೇಕಾಗಿದೆ.

ಓಂ ಶಾಂತಿ. ಮನುಷ್ಯ ತಂದೆಯನ್ನು ಸತ್ಯ ರಾಜ (ಸಚ್ಚಾ ಪಾತಶಾಹ) ಎಂದೂ ಹೇಳುತ್ತಾರೆ. ಆಂಗ್ಲದಲ್ಲಿ ರಾಜ ಎಂದು ಹೇಳುವುದಿಲ್ಲ, ಅದರಲ್ಲಿ ಕೇವಲ ಸತ್ಯ ತಂದೆ ಎಂದು ಹೇಳುತ್ತಾರೆ. ಗಾಡ್ ಫಾದರ್ ಸತ್ಯವಾಗಿದ್ದಾರೆ ಎಂದು ಹೆಳುತ್ತಾರೆ. ಭಾರತದಲ್ಲಿಯೇ ಸತ್ಯ ರಾಜ (ಸಚ್ಚಾ ಪಾತಶಾಹ) ಎಂದು ಹೇಳುತ್ತಾರೆ. ವ್ಯತ್ಯಾಸವಂತು ಬಹಳಷ್ಟಿದೆ. ಅವರು ಕೇವಲ ಸತ್ಯ ಹೇಳುತ್ತಾರೆ, ಸತ್ಯ ಕಲಿಸುತ್ತಾರೆ, ಸತ್ಯವಂತರನ್ನಾಗಿ ಮಾಡುತ್ತಾರೆ. ಇಲ್ಲಿ ಹೇಳುತ್ತಾರೆ ಸತ್ಯ ರಾಜ (ಸಚ್ಚಾ ಪಾತಶಾಹ). ಸತ್ಯವಂತರನ್ನಾಗಿಯು ಮಾಡುತ್ತಾರೆ ಮತ್ತು ಸತ್ಯಖಂಡದ ರಾಜನ್ನಾಗಿಯು ಮಾಡುತ್ತಾರೆ. ಇದಂತು ಸರಿಯಿದೆ – ಮುಕ್ತಿಯನ್ನು ಕೊಡುತ್ತಾರೆ, ಜೀವನಮುಕ್ತಿಯನ್ನೂ ಕೊಡುತ್ತಾರೆ, ಯವುದಕ್ಕೆ ಭಕ್ತಿಯ ಫಲ ಎಂದು ಹೇಳುತ್ತಾರೆ. ಮುಕ್ತಿ ಮತ್ತು ಫಲಪ್ರಾಪ್ತಿ. ಭಕ್ತಿಯ ಫಲವನ್ನು ಕೊಡುತ್ತಾರೆ ಮತ್ತು ಮುಕ್ತರನ್ನಾಗಿ ಮಾಡುತ್ತಾರೆ. ಮಕ್ಕಳು ತಿಳಿದುಕೊಂಡಿದೀರಿ ನಮಗೆ ಎರಡು ಕೊಡುತ್ತಾರೆ. ಮುಕ್ತ ಎಲ್ಲರನ್ನು ಮಾಡುತ್ತಾರೆ, ಫಲ ನಿಮಗೆ ಕೊಡುತ್ತಾರೆ. ಮುಕ್ತಿ ಮತ್ತು ಫಲಪ್ರಾಪ್ತಿ – ಇದು ಸಹ ಭಾಷೆ ಮಾಡಲಾಗಿದೆಯಲ್ಲವೇ. ಭಾಷೆಗಳಂತು ಅನೇಕ ಇವೆ. ಶಿವಬಾಬಾರವರ ಹೆಸರು ಸಹ ಅನೇಕ ಇಟ್ಟು ಬಿಡುತ್ತಾರೆ. ಯಾರಿಗಾದರೂ ಹೇಳಿ ಅವರ ಹೆಸರು ಶಿವಬಾಬಾ ಆಗಿದೆ ಎಂದು, ಆಗ ಅವರು ಹೇಳುತ್ತಾರೆ ನಾವಂತು ಅವರನ್ನು ಮಾಲೀಕ ಎಂದೇ ಕರೆಯುತ್ತೇವೆ. ಮಾಲೀಕ ಸರಿಯಿದೆ ಆದರೆ ಅವರದು ಸಹ ಹೆಸರಿರುತ್ತದೆಯಲ್ಲವೇ. ನಾಮ-ರೂಪದಿಂದ ಯಾವುದೇ ವಸ್ತುವಿಲ್ಲ. ಮಾಲೀಕನೂ ಸಹ ಯಾವುದೋ ವಸ್ತುವಿಗೆ ಆಗುತ್ತಾರಲ್ಲವೇ. ನಾಮ-ರೂಪವಂತು ಅವಶ್ಯವಾಗಿದೆ. ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ-ತಂದೆಯು ನಿಜವಾಗಿಯು ಮುಕ್ತರನ್ನಾಗಿ ಮಾಡುತ್ತಾರೆ ನಂತರ ಶಾಂತಿಧಾಮಕ್ಕೆ ಎಲ್ಲರೂ ಅವಶ್ಯವಾಗಿ ಹೋಗಬೇಕಾಗಿದೆ. ಪ್ರತಿಯೊಬ್ಬರು ತಮ್ಮ ಮನೆಯನ್ನು ನೋಡಬೇಕು. ಮನೆಯಿಂದ ಬಂದಿದ್ದೇವೆಂದರೆ ಮೊದಲು ಅದನ್ನು ನೋಡುವೆವು, ಅದಕ್ಕೆ ಹೇಳಲಾಗುತ್ತದೆ ಗತಿ-ಸದ್ಗತಿ. ಅಕ್ಷರವಂತು ಹೇಳುತ್ತಾರೆ ಆದರೆ ಅರ್ಥರಹಿತ. ನೀವು ಮಕ್ಕಳಿಗೆ ಭಾವನೆಯಿದೆ, ನಾವು ನಮ್ಮ ಮನೆಗೆ ಹೋಗುತ್ತೇವೆ ಮತ್ತು ಫಲವೂ ಸಿಗುತ್ತದೆ. ನಂಬರ್ವಾರಾಗಿ ನಿಮಗೆ ಸಿಗುತ್ತದೆ ಮತ್ತು ಅನ್ಯ ಧರ್ಮದವರಿಗೆ ನಂತರ ಸಮಯಾನುಸಾರ ಸಿಗುವುದು. ತಂದೆಯು ತಿಳಿಸಿದ್ದಾರೆ ಈ ಕರಪತ್ರಗಳು ಬಹಳ ಚೆನ್ನಾಗಿವೆ - ನೀವು ಸ್ವರ್ಗವಾಸಿಯಾಗಿದ್ದೀರಾ ಅಥವಾ ನರಕವಾಸಿಯಾಗಿದ್ದೀರಾ? ನೀವು ಮಕ್ಕಳೇ ತಿಳಿದಿದ್ದೀರಿ ಈ ಮುಕ್ತಿ ಜೀವನಮುಕ್ತಿ ಎರಡು ಈಶ್ವರೀಯ ಜನ್ಮ ಸಿದ್ಧ ಅಧಿಕಾರವಾಗಿದೆ. ನೀವು ಬರೆಯೂ ಬಹುದು. ತಂದೆಯಿಂದ ನೀವು ಮಕ್ಕಳಿಗೆ ಜನ್ಮ ಸಿದ್ಧ ಅಧಿಕಾರ ಸಿಗುತ್ತದೆ. ತಂದೆಯವರಾಗುವುದರಿಂದ ಎರಡು ವಸ್ತುಗಳ ಪ್ರಾಪ್ತಿಯಾಗುತ್ತದೆ. ಅದಾಗಿದೆ ರಾವಣನ ಜನ್ಮ ಸಿದ್ಧ ಅಧಿಕಾರ, ಇದಾಗಿದೆ ಪರಮಪಿತ ಪರಮಾತ್ಮನ ಜನ್ಮ ಸಿದ್ಧ ಅಧಿಕಾರ. ಇದಾಗಿದೆ ಭಗವಂತನ ಜನ್ಮ ಸಿದ್ಧ ಅಧಿಕಾರ, ಅದಾಗಿದೆ ಭೂತದ ಜನ್ಮ ಸಿದ್ಧ ಅಧಿಕಾರ. ಈ ರೀತಿ ಬರೆಯಬೇಕು ಯಾವುದರಿಂದ ಸ್ವಲ್ಪ ತಿಳಿದುಕೊಳ್ಳಲಿ. ಈಗ ನೀವು ಮಕ್ಕಳು ಸ್ವರ್ಗವನ್ನು ಸ್ಥಾಪನೆ ಮಾಡಬೇಕಾಗಿದೆ. ಎಷ್ಟೊಂದು ಕಾರ್ಯವನ್ನು ಮಾಡಬೇಕಾಗಿದೆ. ಈಗಂತು ನೀವು ಚಿಕ್ಕ ಮಕ್ಕಳ ಹಾಗೆ ಇದ್ದೀರಿ, ಹೇಗೆ ಮನುಷ್ಯರು ಕಲಿಯುಗಕ್ಕೆ ಹೇಳುತ್ತಾರೆ ಇನ್ನೂ ಮಗುವಾಗಿದೆ. ತಂದೆಯು ಹೇಳುತ್ತಾರೆ ಸತ್ಯಯುಗದ ಸ್ಥಾಪನೆಯಲ್ಲಿ ಮಗುವಾಗಿದ್ದೀರಿ. ಈಗ ನೀವು ಮಕ್ಕಳಿಗೆ ಆಸ್ತಿ ಸಿಗುತ್ತಿದೆ. ರಾವಣನ ಯಾವುದೇ ಆಸ್ತಿ ಎಂದು ಹೇಳುವುದಿಲ್ಲ. ಭಗವಂತ ತಂದೆಯಿಂದಂತು ಆಸ್ತಿ ಸಿಗುತ್ತದೆ. ಅವರೇನು ತಂದೆಯೇ, ಅವರಿಗೆ (ರಾವಣ 5 ವಿಕಾರಗಳಿಗೆ) ಭೂತವೆಂದು ಹೇಳಲಾಗುತ್ತದೆ. ಭೂತದಿಂದ ಏನು ಆಸ್ತಿಯು ಸಿಗುತ್ತದೆ? 5 ವಿಕಾರಗಳು ಸಿಗುತ್ತದೆ, ಹಾಗೆಯೇ ಪ್ರದರ್ಶಿಸುತ್ತಾರೆ, ಯಾವುದರಿಂದ ನೀವು ತಮೋಪ್ರಧಾನರಾಗಿ ಬಿಡುತ್ತೀರಿ. ದಸರಾ ಹಬ್ಬ ಎಷ್ಟು ಆಚರಿಸುತ್ತಾರೆ, ಸಮಾರಂಭಗಳನ್ನು ಮಾಡುತ್ತಾರೆ. ಬಹಳಷ್ಟು ಖರ್ಚು ಮಾಡುತ್ತಾರೆ. ವಿದೇಶದಿಂದಲೂ ನಿಮಂತ್ರಣವನ್ನು ಕೊಟ್ಟು ಕರೆಸುತ್ತಾರೆ. ಎಲ್ಲದಕ್ಕಿಂತ ಹೆಸರುವಾಸಿ ಮೈಸೂರಿನ ದಸರಾವನ್ನು ಆಚರಿಸುತ್ತಾರೆ. ಹಣವುಳ್ಳವರು ಅನೇಕರಿದ್ದಾರೆ. ರಾವಣರಾಜ್ಯದಲ್ಲಿ ಹಣ ಸಿಗುತ್ತದೆ ಎಂದರೆ ಬುದ್ಧಿಯು ಕಳೆದುಹೋಗುತ್ತದೆ. ತಂದೆಯು ವಿಸ್ತಾರದಲ್ಲಿ ತಿಳಿಸುತ್ತಾರೆ. ಇದರ ಹೆಸರೇ ಆಗಿದೆ ರಾವಣ ರಾಜ್ಯ. ಅದಕ್ಕೆ ನಂತರ ಈಶ್ವರೀಯ ರಾಜ್ಯವೆಂದು ಹೇಳಲಾಗುತ್ತದೆ. ರಾಮ ರಾಜ್ಯವೆಂದು ಹೇಳುವುದೂ ಸಹ ತಪ್ಪಾಗುತ್ತದೆ. ಗಾಂಧೀಜೀಯವರು ರಾಮರಾಜ್ಯ ಬಯಸುತ್ತಿದ್ದರು. ಮನುಷ್ಯರು ತಿಳಿಯುತ್ತಾರೆ ಗಾಂಧೀಜೀಯವರು ಅವತಾರರಾಗಿದ್ದಾರೆಂದು. ಅವರಿಗೆ ಎಷ್ಟು ಹಣವನ್ನು ಕೊಡುತ್ತಿದ್ದರು. ಅವರನ್ನು

ಭಾರತದ ಬಾಪೂಜೀ ಎಂದು ಹೇಳುತ್ತಿದ್ದರು. ಈಗಂತು ಇವರು ಇಡೀ ವಿಶ್ವದ ಬಾಪೂಜೀಯಾಗಿದ್ದಾರೆ. ಈಗ ನೀವು ಇಲ್ಲಿ ಕುಳಿತ್ತಿದ್ದೀರಿ, ತಿಳಿದುಕೊಂಡಿದ್ದೀರಿ ಎಷ್ಟು ಜೀವಾತ್ಮರಿರಬಹುದು. ಜೀವ(ಶರೀರ) ವಿನಾಶಿಯಾಗಿದೆ, ಆತ್ಮ ಅವಿನಾಶಿಯಾಗಿದೆ. ಆತ್ಮರು ಅನೇಕರಿದ್ದಾರೆ. ಹೇಗೆ ಆಕಾಶದಲ್ಲಿ ನಕ್ಷತ್ರಗಳು ಇರುತ್ತವೆಯಲ್ಲವೇ. ನಕ್ಷತ್ರಗಳು ಹೆಚ್ಚು ಇವೆಯೋ ಅಥವಾ ಆತ್ಮರು ಹೆಚ್ಚು ಇದ್ದಾರೆಯೋ? ಏಕೆಂದರೆ ನೀವು ಧರಣಿಯ ನಕ್ಷತ್ರಗಳಾಗಿದ್ದೀರಿ ಮತ್ತು ಅವು ಆಕಾಶದ ನಕ್ಷತ್ರಗಳು. ನಿಮಗೆ ದೇವತೆಗಳು ಎಂದು ಹೇಳುತ್ತಾರೆ ಅವರು ಅವುಗಳಿಗೂ ದೇವತೆ ಎಂದು ಹೇಳುತ್ತಾರೆ. ನಿಮಗೆ ಅದೃಷ್ಟದ ನಕ್ಷತ್ರಗಳೆಂದು ಹೇಳುತ್ತಾರಲ್ಲವೇ.

ಒಳ್ಳೆಯದು, ಈ ವಿಷಯದ ಮೇಲೆ ನಂತರ ಪರಸ್ಪರ ವರ್ತಾಲಾಪ ಮಾಡಿರಿ. ಬಾಬಾರವರು ಈ ವಿಷಯದ ಬಗ್ಗೆ ಎತ್ತುವುದಿಲ್ಲ. ತಿಳಿಸಲಾಗಿದೆ ಎಲ್ಲಾ ಆತ್ಮರ ಒಬ್ಬ ತಂದೆಯಾಗಿದ್ದಾರೆ, ಇವರ ಬುದ್ಧಿಯಲ್ಲಿ ಎಲ್ಲವೂ ಇದೆ, ಯಾರೆಲ್ಲಾ ಮನುಷ್ಯ ಮಾತ್ರರಿದ್ದಾರೆ, ಎಲ್ಲರ ತಂದೆಯಾಗಿದ್ದಾರೆ. ಇದಂತು ಎಲ್ಲರೂ ತಿಳಿದುಕೊಂಡಿದ್ದಾರೆ ಇಡೀ ಸೃಷ್ಟಿಯು ಸಮುದ್ರದ ಮೇಲೆ ನಿಂತಿದೆ. ಇದು ಸಹ ಎಲ್ಲರಿಗೂ ಗೊತ್ತಿಲ್ಲ, ತಂದೆಯು ತಿಳಿಸಿದ್ದರು ಈ ರಾವಣ ರಾಜ್ಯ ಇಡೀ ಸೃಷ್ಟಿಯ ಮೇಲಿದೆ. ಈ ರೀತಿಯಲ್ಲ, ರಾವಣನ ರಾಜ್ಯ ಯಾವುದೋ ಸಾಗರನ ಪಾರದಲ್ಲಿದೆ. ಸಾಗರವಂತು ಎಲ್ಲಾಕಡೆಯಿದೆ(ಆಲ್ರೌಂಡ್). ಹೇಳುತ್ತಾರೆ – ಕೆಳಗಡೆ ಗೂಳಿ ಇದೆ, ಅದರ ಒಂದು ಕೊಂಬಿನ ಮೇಲೆ ಸೃಷ್ಟಿಯು ನಿಂತಿದೆ. ಯಾವಾಗ ಸುಸ್ತಾಗುತ್ತದೆ ಆಗ ಕೊಂಬನ್ನು ಬದಲಾಯಿಸುತ್ತದೆ. ಈಗ ಹಳೆಯ ಪ್ರಪಂಚ ವಿನಾಶವಾಗಿ ಹೊಸ ಪ್ರಪಂಚದ ಸ್ಥಾಪನೆಯಾಗುತ್ತದೆ. ಶಾಸ್ತ್ರಗಳಲ್ಲಿ ಅನೇಕ ಪ್ರಕಾರದ ಮತುಗಳನ್ನು ದಂತ ಕಥೆಗಳಲ್ಲಿ ಬರೆದುಬಿಟ್ಟಿದ್ದಾರೆ. ಮಕ್ಕಳು ತಿಳಿದುಕೊಂಡಿದ್ದೀರಿ- ಇಲ್ಲಿ ಎಲ್ಲಾ ಆತ್ಮರು ಶರೀರದ ಜೊತೆಯಿದ್ದಾರೆ, ಇದಕ್ಕೆ ಜೀವಾತ್ಮಗಳೆಂದು ಹೆಳಲಾಗುತ್ತದೆ. ಅಲ್ಲಿ ಆತ್ಮಗಳ ಮನೆಯಿದೆ ಅಲ್ಲಂತು ಶರೀರವಿಲ್ಲ. ಅವರನ್ನು ನಿರಾಕಾರವೆಂದು ಹೇಳಲಾಗುತ್ತದೆ. ಜೀವ ಆಕಾರಿಯಾಗಿದೆ ಅದಕ್ಕೆ ಸಾಕಾರವೆಂದು ಹೇಳಲಾಗುತ್ತದೆ. ನಿರಾಕಾರನಿಗೆ ಶರೀರವಿರುವುದಿಲ್ಲ. ಇದಾಗಿದೆ ಸಾಕಾರಿ ಸೃಷ್ಟಿ. ಅದಾಗಿದೆ ನಿರಾಕಾರಿ ಆತ್ಮಗಳ ಪ್ರಪಂಚ. ಇದನ್ನು ಸೃಷ್ಟಿಯೆಂದು ಹೇಳಲಾಗುತ್ತದೆ, ಅದಕ್ಕೆ ನಿರಾಕಾರಿ ಪ್ರಪಂಚವೆಂದು ಹೇಳಲಾಗುತ್ತದೆ. ಯಾವಾಗ ಆತ್ಮ ಶರೀರದಲ್ಲಿಬರುತ್ತದೆ ಆಗ ಚಲನವಲನ ನಡೆಯುತ್ತದೆ. ಇಲ್ಲವೆಂದರೆ ಶರೀರವು ಯಾವ ಕೆಲಸಕ್ಕೂ ಬರುವುದಿಲ್ಲ. ಅದನ್ನು ನಿರಾಕಾರಿ ಪ್ರಪಂಚವೆಂದು ಹೇಳಲಾಗುತ್ತದೆ. ಎಷ್ಟೆಲ್ಲಾ ಆತ್ಮರಿದ್ದಾರೆ ಅವರೆಲ್ಲರೂ ಅಚಿತಿಮದಲ್ಲಿ ಬರಬೇಕಾಗುತ್ತದೆ ಅದಕ್ಕೆ ಇದನ್ನು ಪುರುಷೋತ್ತಮ ಸಂಗಮಯುಗವೆಂದು ಹೇಳಲಾಗುತ್ತದೆ. ಎಲ್ಲಾ ಆತ್ಮರು ಯಾವಾಗ ಇಲ್ಲಿ ಬರುತ್ತವೆ ಆಗ ಅಲ್ಲಿ ಒಂದು ಆತ್ಮವು ಇರುವುದಿಲ್ಲ. ಅಲ್ಲಿ ಯಾವಾಗ ಒಮ್ಮೆಲೇ ಖಾಲಿಯಾಗಿ ಬಿಡುತ್ತದೆ ಆಗ ಎಲ್ಲರೂ ವಾಪಸ್ ಹೋಗುತ್ತಾರೆ. ನೀವು ಈ ಸಂಸ್ಕಾರವನ್ನು ನಂಬರ್ವಾರ್ ಪುರುಷಾರ್ಥದ ಅನುಸಾರವಾಗಿ ತೆಗೆದುಕೊಂಡು ಹೋಗುತ್ತೀರಿ. ಕೆಲವರು ಜ್ಞಾನದ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತಾರೆ, ಕೆಲವು ಪವಿತ್ರತೆಯ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತಾರೆ. ಇಲ್ಲಿಯೇ ಬರಬೇಕಾಗುತ್ತದೆ. ಆದರೆ ಮೊದಲು ಮನೆಗೆ ಹೋಗಬೇಕಾಗುತ್ತದೆ. ಅಲ್ಲಿ ಒಳ್ಳೆಯ ಸಂಸ್ಕಾರಗಳಿವೆ. ಇಲ್ಲಿ ಕೆಟ್ಟ ಸಂಸ್ಕಾರಗಳಿವೆ. ಒಳ್ಳೆಯ ಸಂಸ್ಕಾರಗಳು ಬದಲಾಗಿ ಕೆಟ್ಟ ಸಂಸ್ಕಾರಗಳಾಗಿ ಬಿಡುತ್ತವೆ. ನಂತರ ಕೆಟ್ಟ ಸಂಸ್ಕಾರಗಳು ಯೋಗಬಲದಿಂದ ಒಳ್ಳೆಯದಾಗುತ್ತವೆ. ಒಳ್ಳೆಯ ಸಂಸ್ಕಾರಗಳನ್ನು ಅಲ್ಲಿ ತೆಗೆದುಕೊಂಡು ಹೋಗುತ್ತೇವೆ. ತಂದೆಯಲ್ಲಿಯೂ ಓದಿಸುವ ಸಂಸ್ಕಾರವಿದೆಯಲ್ಲವೇ, ಯಾವುದರಿಂದ ಬಂದು ತಿಳಿಸುತ್ತಾರೆ. ರಚಯಿತ ಮತ್ತು ರಚನೆಯ ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ತಿಳಿಸುತ್ತಾರೆ. ಬೀಜದ ಬಗ್ಗೆಯು ತಿಳಿಸುತ್ತಾರೆ, ಇಡೀ ವೃಕ್ಷದ ಬಗ್ಗೆಯು ತಿಳಿಸುತ್ತಾರೆ. ಬೀಜದ ಬಗ್ಗೆ ತಿಳಿಯುವುದಾಗಿದೆ ಜ್ಞಾನ ಮತ್ತು ವೃಕ್ಷದ ಬಗ್ಗೆ ತಿಳಿಯುವುದಾಗಿದೆ ಭಕ್ತಿ. ಭಕ್ತಿಯಲ್ಲಿ ಬಹಳಷ್ಟು ವಿಸ್ತಾರವಿದೆಯಲ್ಲವೇ. ಬೀಜವನ್ನು ನೆನಪು ಮಾಡುವುದು ಸಹಜವಾಗಿದೆ. ಅಲ್ಲಿಯೇ ಹೋಗಬೇಕಾಗಿದೆ. ತಮೋಪ್ರಧಾನದಿಂದ ಸತೋಪ್ರಧಾನರಾಗುವುದರಲ್ಲಿ ಸ್ವಲ್ಪವೇ ಸಮಯ ಹಿಡಿಸುತ್ತದೆ. ನಂತರ ಸತೋಪ್ರಧಾನದಿಂದ ತಮೋಪ್ರಧಾನರಾಗುವುದರಲ್ಲಿ 5 ಸಾವಿರ ವರ್ಷ ಸರಿಯಾಗಿ ಹಿಡಿಸುತ್ತದೆ. ಈ ಚಕ್ರವು ಬಹಳ ನಿಖರವಾಗಿ ಮಾಡಲ್ಪಟ್ಟಿದೆ ಯಾವುದು ಪುನಾವರ್ತನೆಯಾಗುತ್ತಿರುತ್ತದೆ. ಬೇರೆ ಯಾರು ಈ ಮಾತುಗಳನ್ನು ತಿಳಿಸಲು ಸಾಧ್ಯವಿಲ್ಲ. ನೀವು ತಿಳಿಸ ಬಹುದು. ಅರ್ಧ-ಅರ್ಧ ಮಾಡಲಾಗುತ್ತದೆ. ಅರ್ಧ ಸ್ವರ್ಗ, ಅರ್ಧ ನರಕ ನಂತರ ಇದರ ವಿಸ್ತಾರವನ್ನು ತಿಳಿಸುತ್ತಾರೆ. ಸ್ವರ್ಗದಲ್ಲಿ ಜನ್ಮಗಳು ಕಡಿಮೆ, ಆಯಸ್ಸು ಹೆಚ್ಚಿರುತ್ತದೆ. ನರಕದಲ್ಲಿ ಜನ್ಮಗಳು ಹೆಚ್ಚು, ಆಯಸ್ಸು ಕಡಿಮೆಯಿರುತ್ತದೆ. ಅಲ್ಲಿ ಯೋಗಿಗಳು, ಇಲ್ಲಿ ಭೋಗಿ ಅದಕ್ಕೆ ಇಲ್ಲಿ ಬಹಳ ಜನ್ಮಗಳಿರುತ್ತದೆ. ಈ ಮಾತುಗಳನ್ನು ಬೇರೆ ಯಾರು ತಿಳಿದುಕೊಂಡಿಲ್ಲ. ಮನುಷ್ಯರಿಗೆ ಏನು ಗೊತ್ತಿಲ್ಲ. ದೇವತೆಗಳು ಯಾವಾಗಿದ್ದರು, ಹೇಗೆ ಆದರು, ಎಷ್ಟು ಬುದ್ಧಿವಂತರಾಗಿದ್ದರು- ಇದನ್ನು ನೀವು ತಿಳಿದುಕೊಂಡಿದ್ದೀರಿ. ತಂದೆಯು ಈ ಸಮಯದಲ್ಲಿ ಮಕ್ಕಳಿಗೆ ಓದಿಸಿ 21 ಜನ್ಮಗಳಿಗೆ ಆಸ್ತಿಯನ್ನು ಕೊಡುತ್ತಾರೆ. ನಂತರ ನಿಮ್ಮ ಈ ಸಂಸ್ಕಾರಗಳು ಇರುವುದಿಲ್ಲ. ಯಾವಾಗ ರಾಜ್ಯ ಮಾಡುವ ಸಂಸ್ಕಾರವಿರುತ್ತದೆ ಆಗ ಜ್ಞಾನ ವಿದ್ಯೆಯ ಸಂಸ್ಕಾರ ಪೂರ್ಣವಾಗಿ ಬಿಡುತ್ತದೆ. ಈ ಸಂಸ್ಕಾರಗಳು ಪೂರ್ಣವಾದರೆ ನಂಬರ್ವಾರ್ ಪುರುಷಾರ್ಥದ ಅನುಸಾರ ರುದ್ರ ಮಾಲೆಯಲ್ಲಿ ಪೋಣಿಸಲ್ಪಡುತ್ತೀರಿ ನಂತರ ನಂಬರ್ವಾರಾಗಿ ಪಾತ್ರವನ್ನು ಮಾಡಲು ಬರುವಿರಿ. ಯಾರು ಪೂರ್ಣ 84 ಜನ್ಮಗಳನ್ನು ತೆಗೆದುಕೊಡಿದ್ದಾರೆ, ಅವರೇ ಮೊದಲು ಬರುವರು. ಅವರ ಹೆದರನ್ನು ಹೇಳುತ್ತಾರೆ. ಶ್ರೀಕೃಷ್ಣನಂತು ಸ್ವರ್ಗದ ಮೊದಲನೇ ರಾಜಕುಮಾರನಾಗಿದ್ದಾನೆ. ನೀವು ತಿಳಿದುಕೊಂಡಿದ್ದೀರಿ ಕೇವಲ ಒಬ್ಬರೇ ಇರಲು ಸಾಧ್ಯವಿಲ್ಲ, ಇಡೀ ರಾಜಧಾನಿಯಿರುತ್ತದೆಯಲ್ಲವೇ. ರಾಜನ ಜೊತೆ ಪ್ರಜೆಯು ಬೇಕಾಗುತ್ತದೆ. ಒಬ್ಬರಿಂದ ಇನ್ನೊಂಬರು ಬರಬಹುದು. ಒಂದುಬೇಳೆ 8 ಒಟ್ಟಿಗೆ ಬರುತ್ತಾರೆ ಎಂದು ಹೇಳಿದರೆ, ಶ್ರೀಕೃಷ್ಣನಂತು ಮೊದಲು ಬರುವರು. 8 ಒಟ್ಟಿಗೆ ಬಂದರೆ ಶ್ರೀಕೃಷ್ಣನ ಗಾಯನ ಇಷ್ಟೊಂದು ಏಕೆ? ಈ ಎಲ್ಲಾ ಮಾತನ್ನು ನಂತರ ತಿಳಿಸುವರು. ಹೇಳುತ್ತಾರಲ್ಲವೇ ಇಂದು ನಿಮಗೆ ಬಹಳ

ಗುಹ್ಯವಾದ ಮಾತುಗಳನ್ನು ತಿಳಿಸುತ್ತೇನೆಂದು. ಏನೋ ಇನ್ನೂ ಉಳಿದುಕೊಂಡಿದೆಯಲ್ಲವೇ. ಈ ಯುಕ್ತಿ ಚೆನ್ನಾಗಿದೆ- ಯಾವ ಮಾತನ್ನು ತಿಳಿದುಕೊಂಡಿಲ್ಲ ಆಗ ಹೇಳಿ ನಮ್ಮ ದೊಡ್ಡ ಅಕ್ಕನವರು ಉತ್ತರ ಕೊಡಬಹುದು ಅಥವಾ ಈ ರೀತಿ ಹೇಳಿ ತಂದೆಯು ಇದರ ಬಗ್ಗೆ ನಮಗೆ ಇನ್ನೂ ತಿಳಿಸಿಲ್ಲವೆಂದು. ದಿನ ಪ್ರತಿದಿನ ಗುಹ್ಯವಾದ ಮಾತುಗಳನ್ನು ತಿಳಿಸುತ್ತಾರೆ. ಇದನ್ನು ಹೇಳುವುದರಲ್ಲಿ ನಾಚಿಕೆಯ ಮಾತಿಲ್ಲ. ಗುಹ್ಯವಾದ ಮಾತುಗಳನ್ನು ಯಾವಾಗ ಕೇಳುತ್ತೀರಿ ಆಗ ನಿಮಗೆ ಬಹಳ ಖುಷಿಯಾಗುತ್ತದೆ. ಅಂತಿಮದಲ್ಲಿ ಹೇಳುತ್ತಾರೆ ಮನ್ಮನಾಭವ ಮತ್ತು ಮಧ್ಯಾಜೀಭವ. ಅಕ್ಷರವೂ ಸಹ ಶಾಸ್ತ್ರ ಮಾಡುವವರು ಬರೆದಿದ್ದಾರೆ. ತಬ್ಬಿಬರಾಗುವುದರ ಅವಶ್ಯಕತೆಯಿಲ್ಲ. ಮಗುವು ತಂದೆಯವರಾದರೂ ಮತ್ತು ಬೇಹದ್ದಿನ ಸುಖ ಸಿಕ್ಕಿತು. ಇದರಲ್ಲಿ ಮನಸ್ಸಾ, ವಾಚಾ, ಕರ್ಮಣಾ ಪವಿತ್ರತೆಯ ಅವಶ್ಯಕತೆಯಿದೆ. ಲಕ್ಷ್ಮೀ-ನಾರಯಣರಿಗೆ ತಂದೆಯ ಆಸ್ತಿ ಸಿಕ್ಕಿದೆಯಲ್ಲವೇ. ಇವರು ಮೊದಲನೇ ನಂಬರ್ನವರಾಗಿದ್ದಾರೆ, ಯಾರದು ಪೂಜೆ ನಡೆಯುತ್ತದೆ. ತಮ್ಮನ್ನು ನೋಡಿಕೊಳ್ಳಿ-ನಮ್ಮಲ್ಲಿ ಇಂತಹ ಗುಣಗಳಿವೆಯೇ. ಈಗಂತು ನಿರ್ಗುಣರಾಗಿದ್ದೇವೆ ಅಲ್ಲವೇ. ತಮ್ಮ ಅವಗುಣಗಳ ಬಗ್ಗೆಯು ಯಾರಿಗೂ ಗೊತ್ತಿಲ್ಲ.

ಈಗ ನೀವು ತಂದೆಯವರಾಗಿದ್ದೀರಿ ಅಂದರೆ ಅವಶ್ಯವಾಗಿ ಬದಲಾಗಬೇಕಾಗುತ್ತದೆ. ತಂದೆಯು ಬುದ್ಧಿಯ ಬೀಗ ತೆರೆದಿದ್ದಾರೆ. ಬ್ರಹ್ಮಾ ಮತ್ತು ವಿಷ್ಣುವಿನ ರಹಸ್ಯ ತಿಳಿಸಿದ್ದಾರೆ. ಇದು ಪತಿತವಾಗಿದೆ, ಅದು ಪಾವನವಾಗಿದೆ. ಈ ಪುರುಷೋತ್ತಮ ಸಂಗಮಯುಗದಲ್ಲಿಯೇ ದತ್ತು ತೆಗೆದುಕೊಳ್ಳಲಾಗುತ್ತದೆ. ಪ್ರಜಾಪಿತ ಬ್ರಹ್ಮಾ ಯಾವಾಗ ಇರುತ್ತಾರೆ, ಆಗಲೇ ದತ್ತು ತೆಗೆದುಕೊಳ್ಳಲಾಗುತ್ತದೆ. ಸತ್ಯಯುಗದಲ್ಲಂತು ಇರುವುದಿಲ್ಲ. ಇಲ್ಲಿಯೂ ಯಾರಿಗಾದರೂ ಮಕ್ಕಳಿಲ್ಲವೆಂದರೆ ದತ್ತು ತೆಗೆದುಕೊಳ್ಳುತ್ತಾರಲ್ಲವೇ. ಪ್ರಜಾಪಿತನಿಗೂ ಅವಶ್ಯವಾಗಿ ಬ್ರಾಹ್ಮಣ ಮಕ್ಕಳು ಬೇಕಲ್ಲವೇ. ಇವರಾಗಿದ್ದಾರೆ ಮುಖವಂಶಾವಳಿ. ಅವರಾಗಿದ್ದಾರೆ ಕುಖವಂಶಾವಳಿ ಬ್ರಹ್ಮಾ ಅವರಂತು ಹೆಸರುವಾಸಿಯಾಗಿದ್ದಾರೆ. ಇವರ ಸರ್ನೇಮ ಸಹ ಬೇಹದ್ದಿನದಾಗಿದೆ. ಎಲ್ಲರು ತಿಳಿದಿದ್ದಾರೆ ಪ್ರಜಾಪಿತ ಬ್ರಹ್ಮಾ ಆದಿ ದೇವ ಆಗಿದ್ದಾರೆ, ಆಂಗ್ಲದಲ್ಲಿ ಹೇಳುತ್ತಾರೆ ಗ್ರೇಟ್ ಗ್ರೇಟ್ ಗ್ರಾಂಡ್ ಫಾದರ್. ಇದಾಗಿದೆ ಬೇಹದ್ದಿನ ಸರ್ನೇಮ್. ಅದೆಲ್ಲವೂ ಹದ್ದಿನ ಸರ್ನೇಮ್ ಆಗಿದೆ ಅದಕ್ಕೆ ತಂದೆಯು ತಿಳಿಸುತ್ತಾರೆ ಇದು ಎಲ್ಲರಿಗೂ ಅವಶ್ಯವಾಗಿ ಗೊತ್ತಾಗಬೇಕು ಭಾರತವು ದೊಡ್ಡಕ್ಕಿಂತ ದೊಡ್ಡ ತೀರ್ಥವಾಗಿದೆ, ಎಲ್ಲಿ ಬೇಹದ್ದಿನ ತಂದೆಯು ಬರುತ್ತಾರೆ. ಈ ರೀತಿ ಅಲ್ಲ, ಇಡೀ ಭಾರತದಲ್ಲಿ ವಿರಾಜಮಾನವಾಗಿದ್ದಾರೆ. ಶಾಸ್ತ್ರಗಳಲ್ಲಿ ಮಗಧ ದೇಶವೆಂದು ಬರೆದಿದ್ದಾರೆ, ಆದರೆ ಜ್ಞಾನವು ಎಲ್ಲಿ ಕಲಿಸಿದರು? ಆಬುವಿನಲ್ಲಿ ಹೇಗೆ ಬಂದರು? ದೆಲವಾಢ ಮಂದಿರವು ಇಲ್ಲಿ ಪೂರ್ಣ ನೆನಪಾರ್ಥವಾಗಿದೆ. ಯಾರು ಮಾಡಿಸಿದರೋ, ಅವರ ಬುದ್ಧಿಯಲ್ಲಿ ಬಂದಿತು ಮತ್ತು ಕುಳಿತುಕೊಂಡು ಮಾಡಿಸಿದರು. ನಿಜವಾದ ಮಾಡಲಂತು ಮಾಡಲು ಸಾಧ್ಯವಿಲ್ಲ. ತಂದೆಯು ಇಲ್ಲಿಯೇ ಬಂದು ಸರ್ವರ ಸದ್ಗತಿಯನ್ನು ಮಾಡುತ್ತಾರೆ, ಮಗಧ ದೇಶದಲ್ಲಿ ಅಲ್ಲ. ಅದಂತು ಪಾಕಿಸ್ತಾನವಾಯಿತು. ಇದಾಗಿದೆ ಪಾಕ ಸ್ಥಾನ. ವಾಸ್ತವದಲ್ಲಿ ಪಾಕ ಸ್ಥಾನವೆಂದು ಸ್ವರ್ಗಕ್ಕೆ ಹೇಳಲಾಗುತ್ತದೆ. ಪಾಕ ಮತ್ತು ನಾಪಾಕನ ಎಲ್ಲಾ ಡ್ರಾಮಾ ಮಾಡಲ್ಪಟ್ಟಿದೆ.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳು ನೀವು ತಿಳಿದುಕೊಂಡಿದ್ದೀರಿ ಆತ್ಮರು ಪರಮಾತ್ಮ ಬಹಳ ಸಮಯ ಅಗಲಿದ್ದರು.. .. ಎಷ್ಟು ಸಮಯದ ನಂತರ ಸಿಕ್ಕಿದೆವು? ನಂತರ ಯಾವಾಗ ಸಿಗುವೆವು? ಸುಂದರ ಮೇಳವನ್ನು ಮಾಡಿದಿರಿ ಯಾವಾಗ ಸದ್ಗುರು ದಲಾಲ ರೂಪದಲ್ಲಿ ಸಿಕ್ಕಿದರು. ಗುರುಗಳಂತು ಬಹಳ ಇದ್ದಾರಲ್ಲವೇ ಅದಕ್ಕೆ ಸದ್ಗುರುವೆಂದು ಹೇಳಲಾಗುತ್ತದೆ. ಸ್ತ್ರೀ ಯಾವಾಗ ಮದುವೆ ಮಾಡಿಕೊಳ್ಳುತ್ತಾರೆ ಆಗ ಹೇಳುತ್ತಾರೆ ಈ ಪತಿ ನಿಮ್ಮ ಗುರು ಈಶ್ವರನಾಗಿದ್ದಾರೆ. ಪತಿಯಂತು ಮೊಟ್ಟ ಮೊದಲು ಅಪವಿತ್ರರನ್ನಾಗಿ ಮಾಡುತ್ತಾರೆ. ಇತ್ತೀಚೆಗೆ ಪ್ರಪಂಚದಲ್ಲಿ ಬಹಳಷ್ಟು ಕೊಳಕಾಗಿದ್ದಾರೆ. ಈಗಂತು ನೀವು ಮಕ್ಕಳನ್ನು ಹೂಗಳನ್ನಾಗಿ ಮಾಡುತ್ತಾರೆ. ನೀವು ಮಕ್ಕಳಿಗೆ ಪಕ್ಕಾ ಕಂಕಣವನ್ನು ಕಟ್ಟುತ್ತಾರೆ.

ಶಿವಜಯಂತಿಯ ಜೊತೆಯಲ್ಲಿಯೇ ರಕ್ಷಾಬಂಧನವಾಗಿ ಬಿಡುತ್ತದೆ. ಗೀತಾ ಜಯಂತಿಯೂ ಸಹ ಗೊತ್ತಾಗಬೇಕು. ಶ್ರೀಕೃಷ್ಣನ ಜಯಂತಿ ಸ್ವಲ್ಪ ಸಮಯದ ನಂತರ ಹೊಸ ಪ್ರಪಂಚದಲ್ಲಿ ಆಗುವುದು. ಉಳಿದ ಹಬ್ಬಗಳೆಲ್ಲವೂ ಈ ಸಮಯದ್ದಾಗಿದೆ. ರಾಮ ನವಮಿ ಯಾವಾಗವಿತ್ತು – ಇದು ಸಹ ಯಾರಿಗೂ ಗೊತ್ತಿಲ್ಲ. ನೀವು ಹೇಳುತ್ತೀರಿ ಹೊಸ ಪ್ರಪಂಚದಲ್ಲಿ 1250 ವರ್ಷದ ನಂತರದಲ್ಲಿ ರಾಮನವಮಿಯಿರುತ್ತದೆ. ಶಿವ ಜಯಂತಿ, ಕೃಷ್ಣ ಜಯಂತಿ, ರಾಮ ಜಯಂತಿ ಯಾವಾಗ ಆಗಿತ್ತು? ಇದು ಯಾರು ಹೇಳಲು ಸಾಧ್ಯವಿಲ್ಲ. ನೀವು ಮಕ್ಕಳು ಈಗ ತಂದೆಯ ಮೂಲಕ ತಿಳಿದುಕೊಂಡಿದ್ದೀರಿ. ಸರಿಯಾಗಿ ಹೇಳಬಹುದು. ಇಡೀ ಪ್ರಪಂಚದ ಜೀವನಕಥೆಯನ್ನು ನೀವು ಹೇಳಬಹುದು. ಲಕ್ಷಾಂತರ ವರ್ಷಗಳ ಮಾತು ಹೇಳಲು ಸಾಧ್ಯವಿಲ್ಲ. ತಂದೆಯು ಎಷ್ಟು ಚೆನ್ನಾಗಿ ಬೇಹದ್ದಿನ ವಿದ್ಯೆಯನ್ನು ಓದಿಸುತ್ತಾರೆ. ಒಂದೇಬಾರಿ ನೀವು 21 ಜನ್ಮಕ್ಕಾಗಿ ಅಪವಿತ್ರರಾಗುವುದರಿಂದ ತಪ್ಪಿಸಿಕೊಳ್ಳುತ್ತೀರಿ. ಈಗ ನೀವು 5 ವಿಕಾರಗಳ ರೂಪೀ ರಾವಣನ ಪರ ರಾಜ್ಯದಲ್ಲಿದ್ದೀರಿ. ಈಗ ಇಡೀ 84ರ ಚಕ್ರ ನಿಮ್ಮ ಸ್ಮೃತಿಯಲ್ಲಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿಸಿಕ್ಕಿರುವ ಮಕ್ಕಳಪ್ರತಿ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ತಂದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಬೇಹದ್ದಿನ ಸುಖ ಆಸ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳಲು ಅವಶ್ಯವಾಗಿ ಮನಸ್ಸಾ-ವಾಚಾ-ಕರ್ಮಣಾದಿಂದ ಪವಿತ್ರರಾಗಬೇಕಾಗಿದೆ. ಯೋಗಬಲದಿಂದ ಒಳ್ಳೆಯ ಶ್ರೇಷ್ಠಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳಬೇಕಾಗಿದೆ. ತಮ್ಮನ್ನು ಗುಣವಂತರನ್ನಾಗಿ ಮಾಡಿಕೊಳ್ಳಬೇಕಾಗಿದೆ.

2. ಸದಾ ಖುಷಿಯಲ್ಲಿರಲು- ತಂದೆಯು ಪ್ರತಿನಿತ್ಯವು ಯಾವ ಗುಹ್ಯ ಮಾತುಗಳನ್ನು ತಿಳಿಸುತ್ತಾರೆಯೋ ಅದನ್ನು ಕೇಳಬೇಕು ಮತ್ತು ಅನ್ಯರಿಗೂ ಹೇಳಬೇಕಾಗಿದೆ. ಯಾವುದೇ ಮಾತಿನಲ್ಲಿ ಗೊಂದಲವಾಗಬಾರದು. ಯುಕ್ತಿಯಿಂದ ಉತ್ತರವನ್ನು ಹೇಳಬೇಕು ಸಂಕೋಚಪಡಬಾರದು.

ವರದಾನ: ಸುಖ ಸ್ವರೂಪರಾಗಿ ಎಲ್ಲಾ ಆತ್ಮರಿಗೆ ಸುಖವನ್ನು ಕೊಡುವಂತಹ ಮಾಸ್ಟರ್ ದಾತ ಭವ.

ಯಾವ ಮಕ್ಕಳು ಸದಾ ಯಥಾರ್ಥ ಕರ್ಮ ಮಾಡುತ್ತಾರೆ ಅವರಿಗೆ ಆ ಕರ್ಮದ ಪ್ರತ್ಯಕ್ಷ ಫಲ ಖುಷಿ ಮತ್ತು ಶಕ್ತಿ ಸಿಗುವುದು. ಅವರ ಹೃದಯ ಸದಾ ಖುಷಿಯಾಗಿರುವುದು, ಅವರಿಗೆ ಸಂಕಲ್ಪ ಮಾತ್ರವೂ ಸಹ ದುಃಖದ ಅಲೆ ಬರಲು ಸಾಧ್ಯವಿಲ್ಲ. ಸಂಗಮಯುಗದ ಬ್ರಾಹ್ಮಣ ಅರ್ಥಾತ್ ದುಃಖದ ಹೆಸರು ಗುರುತೂ ಇರುವುದಿಲ್ಲ. ಏಕೆಂದರೆ ಸುಖದಾತನ ಮಕ್ಕಳಾಗಿದ್ದಾರೆ. ಇಂತಹ ಸುಖದಾತನ ಮಕ್ಕಳು ಸ್ವಯಂ ಸಹ ಮಾಸ್ಟರ್ ಸುಖದಾತ ಆಗಿರುತ್ತಾರೆ. ಅವರು ಎಲ್ಲಾ ಆತ್ಮಗಳಿಗೂ ಸದಾ ಸುಖವನ್ನೇ ಕೊಡುತ್ತಾರೆ. ಅವರು ಎಂದೂ ದುಃಖ ಕೊಡುವುದೂ ಇಲ್ಲ ದುಃಖ ತಗೆದುಕೊಳ್ಳುವುದೂ ಇಲ್ಲ.

ಸ್ಲೋಗನ್: ಮಾಸ್ಟರ್ ದಾತಾ ಆಗಿ ಸಹಯೋಗ, ಸ್ನೇಹ ಮತ್ತು ಸಹಾನುಭೂತಿ ಕೊಡಿ - ಇದೇ ದಯಾಹೃದಯಿ ಆತ್ಮದ ನಿಶಾನಿಯಾಗಿದೆ.